

# ಲ್ಯಾಂಡ್‌ಸ್ಕೇಪ್ ಲಲನೆ!



ಈ ಚಿತ್ರವನ್ನು ಗಮನಿಸಿ. ಒಬ್ಬ ಹೆಣ್ಣು ಮಗಳು ಆರಾಮವಾಗಿ ಮಲಗಿದಂತಿದೆ ಈ ದೃಶ್ಯ. ಇದು ನೈಸರ್ಗಿಕವಾಗಿ ಕಂಡರೂ ಇದನ್ನು ಸೃಷ್ಟಿಸಿದ್ದು ಒಬ್ಬ ಕಲಾವಿದ.

ಈಶಾನ್ಯ ಇಂಗ್ಲೆಂಡ್‌ನ ಉತ್ತರ ಬಲ್ಯಾರ್ಂಡ್‌ನಲ್ಲಿರುವ ಕ್ರಾಮ್ಲಿಂಗ್ಟನ್ ನಗರವು ಮೊದಲು ಕಲ್ಲಿದ್ದಿಲು ಗಣಿಗಾರಿಕೆಯ ಸ್ಥಳವಾಗಿತ್ತು. ಇಲ್ಲಿ ಆರಾಮ ಭಂಗಿಯಲ್ಲಿ ಪವಡಿಸಿರುವ ನಗ್ನ ಸ್ತ್ರೀಯ ಬೃಹದಾಕಾರದ ಭೂ ದೃಶ್ಯ ಕಲೆ (ಲ್ಯಾಂಡ್ ಸ್ಕೇಪ್ ಆರ್ಟ್)ಯನ್ನು ರಚಿಸಲಾಗಿದೆ. 'ನಾರ್ತ್ ಬಲ್ಯಾರ್ಂಡಿಯಾ' ಎಂಬ ಹೆಸರುಳ್ಳ ಈಕೆಯ ಹಣೆ ಭಾಗ 100 ಅಡಿಗಳಷ್ಟಿದೆ. ಕೂದಲನ್ನು ಹರಡಿಕೊಂಡು ಬೆನ್ನು ಕೆಳಮುಖವಾಗಿ ಮಲಗಿರುವ ಈಕೆಯ ಉದ್ದ ಒಂದು ಮೈಲಿ ಅಳತೆಯ ಕಾಲುಭಾಗದಷ್ಟಿದೆ. ನೃತ್ಯ ಮಾಡುತ್ತಿರುವಳೇನೋ ಎಂಬಂತೆ ತೋರುವ ಈಕೆಯ ನಡು ಮೈ ಕೆಳಭಾಗವು ತುಸು ಎಡಕ್ಕೆ ತಿರುಗಿದೆ. ಮೇಲಿನಿಂದ ನೋಡಿದಾಗ ಅತ್ಯಂತ ಮನಮೋಹಕವಾಗಿ ಕಾಣುವ ಈ ಭೂದೃಶ್ಯಕಲೆಯ ಲಲನೆಯನ್ನು ಸೃಷ್ಟಿಸಿದ್ದು ಅಮೆರಿಕದ ಭೂದೃಶ್ಯ ವಾಸ್ತುಶಿಲ್ಪಿ ಚಾರ್ಲ್ಸ್ ಜೆಂಕ್ಸ್.

ಕಲ್ಲಿದ್ದಿಲಿಗಾಗಿ ಭೂಮಿಯನ್ನು ಅಗೆಯುತ್ತಿರುವಾಗ ಸಿಕ್ಕಿರುವ ಬಂಡೆಗಳು ಹಾಗೂ ತ್ಯಾಜ್ಯವನ್ನು ಸುಮ್ಮನೆ ಪೇರಿಸುತ್ತಾ ಕಸದ ಗುಡ್ಡೆಯನ್ನಾಗಿಸುವುದರ ಬದಲು ಸುಂದರ ಕಲಾಕೃತಿಯನ್ನು ರಚಿಸಬಾರದೇಕೆ ಎಂದು ಬ್ಯಾಂಕ್ಸ್ ಗ್ರೂಪ್ ಹಾಗೂ ಬ್ಲಾಗರ್ಡ್ ಎಸ್ಟೇಟ್‌ಗಳ ಒಡೆತನದಲ್ಲಿದ್ದ ಗಣಿ ಕೆಲಸಗಾರರರು ಯೋಚಿಸಿದರಂತೆ. ಆಗ ಅವರು ಲ್ಯಾಂಡ್ ಸ್ಕೇಪ್ ರಚನೆಯಲ್ಲಿ ಪ್ರಖ್ಯಾತಿ ಗಳಿಸಿದ್ದ ಚಾರ್ಲ್ಸ್ ಜೆಂಕ್ಸ್ ಅನ್ನು ಸಂಪರ್ಕಿಸಿದರಂತೆ. ಅದರಂತೆ ಕಲ್ಲಿದ್ದಲ ತ್ಯಾಜ್ಯ, ಮಣ್ಣು, ಬಂಡೆ ಮುಂತಾದವುಗಳಿಂದ ಗಣಿ ಕನ್ಯೆ ಜನ್ಮ ತಳೆದಳಂತೆ.

ಇದನ್ನು ರಚಿಸಲು ಚಾರ್ಲ್ಸ್‌ಗೆ ಎರಡು ವರ್ಷಗಳ ಕಾಲ ಬೇಕಾಯಿತಂತೆ. ಅಂಕು ಡೊಂಕಿನ ಸ್ತ್ರೀ ಚಿತ್ರವನ್ನು ಮೂಡಿಸಲು ಸುಮಾರು 1.5 ಟನ್ ಗಳಷ್ಟು ಬಂಡೆ, ಮಣ್ಣು, ಗಣಿ ತ್ಯಾಜ್ಯ ಬೇಕಾಯಿತಂತೆ. ಈಕೆಯ ಮಧ್ಯ ಭಾಗವು ಬಂಡೆಯಿಂದ ರಚಿತವಾಗಿದ್ದು ಕೆಲವು ಜಾಗದಲ್ಲಿ ಮಣ್ಣಿನ ಮೇಲೆ ಚಿಕ್ಕದಾಗಿ ಹುಲ್ಲನ್ನು ಬೆಳೆಸಲಾಗಿದೆ. ಅಲ್ಲಲ್ಲಿ ಹಳೆಯ ಕಟ್ಟಡವನ್ನು ಹಾಗೆಯೇ ಉಳಿಸಿಕೊಂಡು ಹಲವು ಕಡೆ ಗಣಿ ಕಲ್ಲುಗಳನ್ನು ಕಲಾತ್ಮಕವಾಗಿ ಬಳಸಿಕೊಳ್ಳಲಾಗಿದೆ. ಈಕೆಯ ಎತ್ತರವಿರುವ ಹಣೆಯ ಮೇಲೆ ನಿಂತರೆ ಈಕೆ ಜನ್ಮ ತಾಳಿದ ಗಣಿ ಪ್ರದೇಶದ ಹೊರಭಾಗವನ್ನು ವೀಕ್ಷಣೆ ಮಾಡಬಹುದು. ಒಟ್ಟಿನಲ್ಲಿ ಈ ಗಣಿ ತ್ಯಾಜದ ಲಲನೆ ಕಲಾಸಕ್ತರನ್ನು ತನ್ನತ್ತ ಸೂಜಿಗಲ್ಲಿನಂತೆ ಸೆಳೆಯುತ್ತಿರುವುದಂತೂ ಸುಳ್ಳಲ್ಲ.

■ ವಿದ್ಯಾ ವಿ. ಹಾಲಭಾವಿ